**ಓ ಎಸ್ ನಂಃ148/2014**
**ಪಿಡಬ್ಲ್ಯೂ :01**

**ದಿನಾಂಕಃ 08.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಶ್ರೀ ಡಿ ಜೆ ಆರ್ ., ಪ್ರತಿವಾದಿ ಪರ ವಕೀಲರಿಂದ**

ದಾವಾ ಷೆಡ್ಯೂಲ್ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿರುವ ಖಾಲಿ ನಿವೇಶನ 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ದಕ್ಷಿಣ ದಿಕ್ಕಿನ ಖಾಲಿ ನಿವೇಶದನಲ್ಲಿ 1 ನೇ ಪ್ರತಿವಾದಿಯು ಮನೆ ಕಟ್ಟಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮನೆಗೆ ಲಗತ್ತಾಗಿ ಉತ್ತರ ದಿಕ್ಕಿಗೆ ಚಂದ್ರಣ್ಣನವರ ಕುರಿ ಹಟ್ಟಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತವರು ಮನೆ ಕೆರೆಯಾಗಳಹಳ್ಳಿ ಹಾಗೂ ಗಂಡನ ಮನೆ ಚಿಕ್ಕಹಳ್ಳಿ ಎಂದರೆ ಸರಿ. ನನ್ನ ಗಂಡ ಮೃತರಾಗಿರುತ್ತಸರೆ ಎಂದರೆ ಸರಿ. ನನ್ನ ಗಂಡ ಮೃತರಾದ ನಂತರ ನಾನು ತವರು ಮನೆಯಲ್ಲಿವಾಸವಾಗಿರುತ್ತೇನೆ ಎಂದರೆ ಸರಿ. ನಾನು ಕೆರೆಯಾಗಳಹಳ್ಳಿ ಗ್ರಾಮದ ಶಾಲೆಯಲ್ಲಿ ಬಿಸಿ ಊಟ ಅಡುಗೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ.

ನಾನು ನನ್ನ ದೊಡ್ಡಮ್ಮ ಗೌರಮ್ಮ ನವರ ಜಾಗವನ್ನು ಬೇಸಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸರ್ಕಾರಿ ಜಾಗವನ್ನು ನನ್ನ ಹೆಸರಿಗೆ ಮಾಡಿಸಿಕೊಂಡು ಸಾಗುವಳಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಬೇಸಾಯ ಮಾಡುತ್ತಿರುವ ಜಮೀನಿನ ದಕ್ಷಿಣ ದಿಕ್ಕಿನಲ್ಲಿ ಹನುಮಕ್ಕನ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ರಸ್ತೆಯಾದ ನಂತರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಹನುಮಕ್ಕನ ಜಮೀನನ್ನು ಪ್ರತಿವಾದಿಯರು ಕೋರಿಗೆ ( ವಾರಕ್ಕೆ ) ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ನಾನು ನನ್ನ ಜಮೀನಿನಲ್ಲಿ ನೀರು ಕಡಿಮೆಯಾದ ಕಾರಣ ಪ್ರತಿವಾದಿಯರನ್ನು ಜಮೀನಿಗೆ ನೀರು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನೀರನ್ನು ನೀಡದ ಕಾರಣ ಅದರ ಸಿಟ್ಟಿಗಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯರು ಪಂಚಾಯಿತಿಯಿಂದ ಸಾಲವನ್ನು ಪಡೆದು ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿಯೇ 1 ನೇ ಪ್ರತಿವಾದಿಯು ಮೊದಲನೇ ಕಂತಿನ ಹಣವನ್ನು ಪಡೆದು ಅವರ ಜಾಗದಲ್ಲ ಬೇಸ್ ಮೆಂಟ್ ಹಾಕಿದ್ದರು ಎಂದರೆ

**ಓ ಎಸ್ ನಂ:148/2014**
ಪಿಡಬ್ಲ್ಯೂ :01

ಸಾಕ್ಷಿಯು ಬೇಸ್ ಮೆಂಟ್ ಹಾಕುವ ಸಮಯದಲ್ಲಿ ನಾನು ತಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಿಪಿ.4 ರಲ್ಲಿ ಕಾಣುವಂತೆ ಮನೆಯು ನಿರ್ಮಾಣವಾಗಿತ್ತು ಎಂದರೆ ಸಾಕ್ಷಿಯು ಪ್ರತಿವಾದಿಯರು ದೌರ್ಜನ್ಯದಿಂದ ಎದುರಿಸಿ ಬೆದರಿಸಿ ಸದರಿ ಗೋಡೆಯನ್ನು ನಿರ್ಮಿಸಿದ್ದರು ಎಂದು ನುಡಿಯುತ್ತಾರೆ. ನಾನು ಪಂಚಾಯಿತಿಯವರಿಗೆ ನ್ಯಾಯಾಲಯದಲ್ಲಿ ದಾವೆಯು ಇತ್ಯರ್ಥದಲ್ಲಿರುತ್ತದೆ ಎಂದು 1 ನೇ ಪ್ರತಿವಾದಿಗೆ ಹಣ ಬಿಡುಗಡೆ ಮಾಡದಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯರು ಬೇಸ್ಮೆಂಟ್ ಹಾಕುವಾಗ ನಿವೇಶನವನ್ನು ಅಳತೆ ಮಾಡಲಾಗಿರುತ್ತದೆ. ನನ್ನ ಪ್ರಕಾರ 6 ಅಡಿ ಜಾಗ ಕಡಿಮೆ ಇರುತ್ತದೆ. ನಾನು ಈ ದಾವೆಯಲ್ಲಿ ಪ್ರತಿವಾದಿಯವರು 6 ಅಡಿ ಜಾಗವನ್ನು ಒತ್ತುವರಿ ಮಾಡಿದ್ದು ಸದರಿ ಜಾಗವನ್ನು ಬಿಡಿಸಿಕೊಡುವಂತೆ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ಜಾಗವನ್ನು ಒತ್ತುವರಿ ಮಾಡದ ಕಾರಣ ಸದರಿ ಪರಿಹಾರವನ್ನು ಕೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.